ವಿ. ಹೇಮಂತಕುಮಾರ್, ಬೆಂಗಳೂರು
ಬೆಳದಿಂಗಳ ಬಾಲೆಯೊಬ್ಬಳು ಆಗಾಗ್ಗೆ ಫೋನ್ ಮಾಡುತ್ತಿರುತ್ತಾಳಲ್ಲಾ...?



ಎಚ್ಚರ! ‘ಬಾ ನಲ್ಲ ಮಧುಚಂದ್ರಕೆ’ ಎಂದು ಆಹ್ವಾನಿಸಿ ‘ವಿಷಕನ್ಯೆ’ ಆದಾಳು.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
ಕೊರೊನಾ ವಕ್ಕರಿಸಿರುವ ಈ ಸಮಯದಲ್ಲಿ ಕೆಮ್ಮು ಬಂದರೆ ಏನು ಮಾಡಬೇಕು?
ಎದುರಿನವರಿಗೆ ಬೆನ್ನುಮಾಡಿ ಕಿವಿಗೆ ಫೋನ್ ಹಿಡಿಯಿರಿ; ಫೋನಿನಲ್ಲಿನ ಕೆಮ್ಮು ಎಂದುಕೊಳ್ಳುತ್ತಾರೆ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಪೂರ್ಣಿಮೆಯಷ್ಟೇ ಅಮಾವಾಸ್ಯೆಯೂ ಮುಖ್ಯ. ಪೂರ್ಣಿಮಾ ಎಂದು ಹೆಸರಿಡುತ್ತಾರೆ. ಅಮಾವಾಸ್ಯೆಯೆಂದೇಕೆ ಇಡುವುದಿಲ್ಲ?
ಮಹಾ ಲಯದ ಗುಣ ಹೊಂದಿ ನಂಬಿದವರನ್ನು ಅಂಧಕಾರಕ್ಕೆ ನೂಕಿ ತರ್ಪಣ ಬಿಟ್ಟಾರೆಂಬ ಭಯ.

ಗಂಜಾಂ ನಾಗರಾಜ, ಮೈಸೂರು
ಮನುಷ್ಯ ಕಣ್ಣು ಮುಚ್ಚಿಕೊಂಡು ಮಾಡಬಹುದಾದ ಕೆಲಸ ಯಾವುದಾದರೂ ಇದೆಯೆ?



ಕಳ್ಳನಿದ್ರೆ.

ಬಿ. ಚಂದ್ರೇಗೌಡ, ಬೆಂಗಳೂರು
ಹಾರಕ್ಕೂ, ಆಹಾರಕ್ಕೂ ಏನು ವ್ಯತ್ಯಾಸ?
ತುಷ್ಟಿಗೊಂದು, ಪುಷ್ಟಿಗೊಂದು.

ನಸೂಯ ಟಿ. ಕೇದಿಗೆಮನೆ
ಮಳೆ, ಚಳಿ, ಬೇಸಿಗೆ ಕಾಲಗಳೇ ಅದಲು ಬದಲಾಗಿವೆಯಲ್ಲಾ...?
ಕಾಲನಿಗೆ ಕಾಲ್ ಮಾಡುವಂತಹ ಕೆಲಸಗಳನ್ನೇ ಕೈಗೊಂಡ ಕಾರಣ ಕಾಲಧರ್ಮ ಕಾಲವಾಗಿದೆ.

ರಾಜೀವ್ ಮಾಗಲ್, ಸಕಲೇಶಪುರ
ಗುರಿ ಒಂದೇ ಆದರೂ, ಜ್ಯೋತಿಷಿ ಮತ್ತು ಮನೋವೈದ್ಯರಿಗೆ ಇರುವ ವ್ಯತ್ಯಾಸವೇನು?
ಅವರು ಶನಿಗ್ರಹ ಎನ್ನುತ್ತಾರೆ; ಇವರು ಮನೋನಿಗ್ರಹ ಎನ್ನುತ್ತಾರೆ.

ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ
ಜೀವ ಮುಖ್ಯಾನೋ, ಜೀವನ ಮುಖ್ಯಾನೋ?
ಅವರಿವರ ಜೀವ ತಿನ್ನದ ಜೀವನ ಮುಖ್ಯ.

ಸುಮನಾ, ತೆಲಂಗಾಣ
ಆತ್ಮಕ್ಕೆ ಸಾವಿಲ್ಲ. ಹಾಗಾದಾಗ ಆತ್ಮಹತ್ಯೆ ಎನ್ನುವುದು ಎಷ್ಟು ಸರಿ?
ನಾಮಪದದ ಆತ್ಮಕ್ಕೆ ಸಾವಿಲ್ಲ; ವಿಶೇಷಣದ ಆತ್ಮಕ್ಕೆ (ಆತ್ಮಹಿತ, ಆತ್ಮರತಿ, ಆತ್ಮವಶ...) ಸಾವಿದೆ.

ನಾಗೇಶ್ ಮೈಸೂರು, ಸಿಂಗಪುರ
ವರನ ಹೆಸರು ರಾಮ. ವಧುವಿನ ಹೆಸರು ದ್ರೌಪತಿ. ವಿವಾಹೋತ್ತರ ಜೀವನ?
ಬಾಳಿಸಿದರೆ ಸುಂದರಕಾಂಡ; ಕಿರಿಕಿರಿಯಾದರೆ ಅರಣ್ಯಪರ್ವ, ಅನುಶಾಸನಪರ್ವ, ಮಾಸಾಶನ ಪರ್ವ.

ನಾಜ್ಯೋತಿ, ಹೂವಿನಹಡಗಲಿ
ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದರೆ ಏನರ್ಥ?
ಉತ್ತರಕ್ಕಾಗಿ ಆರ್‌ಸಿಬಿ ತಂಡದ ಪಂದ್ಯಗಳನ್ನು ನೋಡಿ.

ಎಂ.ಎ. ಕುಮಾರ್, ಬೆಂಗಳೂರು
ಮೇಕಪ್ ಸುಂದರಿ, ಮೇಕಪ್ಪಿಲ್ಲದ ಸುಂದರಿಯರಲ್ಲಿ ಯಾರು ಸುಂದರಿ?
ಯಾರು ಗುಣಸುಂದರಿಯೋ ಅವಳು.

ಶಿವಮೊಗ್ಗ ರಮೇಶ್, ಮೈಸೂರು
ಮಠಾಧೀಶರ ರಾಜಕೀಯ ಪ್ರವೇಶ ಸಮಾಜ ಕಲ್ಯಾಣಕ್ಕೆ ವರವೋ, ಶಾಪವೋ?
ಬ್ರಾಹ್ಮಣ್ಯ ಕ್ಷಾತ್ರವಾಗಕೂಡದೆಂದೇ ಚಾಣಕ್ಯ ಹೊರಗುಳಿದ. ಧರ್ಮ ಬ್ರಾಹ್ಮಣ್ಯ.

ರಾಜೇಶ್ವರಿ, ಪುತ್ತೂರು
ಉತ್ತರಿಸಲಾಗದ ಪ್ರಶ್ನೆ ಎನ್ನುವುದೊಂದಿದೆಯಾ ರಾಮ್‌ಜೀ?
ಊಹೂಂ. ‘ಈ ಪ್ರಶ್ನೆಗೆ ಉತ್ತರಿಸಲಾರೆ’ ಎನ್ನುವುದೂ ಉತ್ತರವೇ.

## ಬಹುಮಾನಿತ ಪ್ರಶ್ನೆ

ಶಂಕರಪ್ಪ, ಶಿವಮೊಗ್ಗ
ಮನೆಯ ಯಜಮಾನ ತನ್ನನ್ನು ಇತರರು ಎಷ್ಟೇ ಕಡೆಗಣಿಸಿದರೂ ತಾನು ಒಳಿತನ್ನೇ ಬಯಸಿದರೆ ಪ್ರತಿಫಲ?
ಕಷ್ಟ ನಷ್ಟ ನೋವುಗಳ ಮಧ್ಯೆಯೂ ಕಂಡೂಕಾಣದ ಆತ್ಮತೃಪ್ತಿ.

ಹೇಮಾ ಗೋಪಾಲ, ಊರಿಲ್ಲ
ಅಡಿಗೆ ಮಾಡಿ ಉಣ್ಣುವ ಬದಲು ಅವಶ್ಯ ಸತ್ವಯುತ ಮಾತ್ರೆಗಳನ್ನೇ ದಿನಕ್ಕೆ ಮೂರು ಬಾರಿ ತಿಂದರೆ?
ಇದೇ ನಮ್ಮ ಫ್ಯೂಚರ್ರು; ಕೆಲವೇ ದಶಕಗಳಲ್ಲಿ ಕೈತೊಳೆಯಲೂ ನೀರಿಲ್ಲದೆ ಈ ಪರಿಸ್ಥಿತಿ ತಲುಪುತ್ತೇವೆ.

ವಿಜಯ್‌ಕುಮಾರ್ ಹೆಚ್.ಕೆ. ರಾಯಚೂರು
ಭಿಕ್ಷುಕರು ಬ್ಯಾಂಕ್ ಮುಂದೆ ಬೇಡುವುದನ್ನು ಬಿಟ್ಟು ದೇವಸ್ಥಾನದ ಮುಂದೆ ಬೇಡುವುದೇಕೆ?



ಬೇಡಲು ಹೋದರಂತೆ, ‘ಚಿಲ್ರೆಯನ್ನು ಪಿಗ್ಮಿ ಕಟ್ಟಿ’ ಎಂದು ಮ್ಯಾನೇಜರೇ ಬೇಡತೊಡಗಿದನಂತೆ.

ಬಿ.ಆರ್. ಉಷಾ, ಬೆಂಗಳೂರು
ದೇವರಿಗೆ ಭಕ್ತಿಯಿಂದ ಪೂಜಿಸಿ ಉಪವಾಸ ಮಾಡಿ ನನಗೆ ಬಹುಮಾನ ಪ್ರಶ್ನೆ ಕೊಡೆಂದು ಬೇಡುವೆ. ನಿಮ್ಮ ಸಲಹೆ?
ಕಿಟಕಿಯಿಂದ ಹೊರಕ್ಕೆ ಇಣುಕಿ; ಪ್ರಕೃತಿ ನೀಡುವಷ್ಟು ಪ್ರಶ್ನೆಯನ್ನು ದೇವನೂ ನೀಡನು.

ಎಂ.ಟಿ. ರಮಾನಂದ ರೆಡ್ಡಿ, ಡಿಎಸ್ ಹಳ್ಳಿ
ಮರಣ ಮೃದಂಗ, ರಣಕೇಕೆ ಈ ಪದಗಳನ್ನು ಯಾವ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ?
ಕೆಂಡಮೋರೆ ಚೀರೇಂದ್ರನಾಥರ ಪುಸ್ತಕದಿಂದ ಆಯ್ದು ಕೊಲ್ಲಲಾಗಿದೆ.

ಎಸ್. ವೈದೇಹಿ, ಮೈಸೂರು
ಹುಂಡಿಗೆ ಹಾಕುವ ಹಣಕ್ಕೂ, ಮುಯ್ಯಿ ಮಾಡುವ ಹಣಕ್ಕೂ ಏನು ವ್ಯತ್ಯಾಸ?
ಇದು ಧರ್ಮ, ಅದು ಕರ್ಮ.

■ ರಾಮ್

ಪ್ರಶ್ನೆ ಕಳುಹಿಸಲು: **editorsu@sudha.co.in**